# UGC to roll out NET for M Phil, PhD programmes

**Proposed changes aim at bringing uniformity in admission process**

PRAKASH KUMAR
NEW DELHI, DHNS

All higher education institutions across the country will soon have to enroll all category of students in PhD programmes on the basis of their scores in entrance test and interview.

The University Grants Commission (UGC) is in the process of making it mandatory for all higher education institutions to follow the two-step process for selection of students for M Phill and PhD programmes.

With the enforcement of the revised rules, the national eligibility test (NET) qualified research scholars and those with M Phill degree will also have to clear both the entrance test and the interview.

A large number of higher education institutions in various states admit NET-qualified research scholars and those with M Phill degrees on the basis of their performance in interviews.

The existing rules provide the universities and other higher education institutions the freedom to decide their own terms and conditions for admission.

The proposed changes in the UGC regulations aim at bringing uniformity in the admission process and standardise the entrance tests held by the individual institutions for admissions.

In the draft regulations, it has left it open for the states to decide if they want to conduct a common entrance test for filling up M Phill and PhD seats in the higher education institutions functioning under them.

The higher education institutions have also not been restricted from conducting their own entrance tests and interviews.

"But they will have to keep the standards of their test at par with those proposed to be held at the national and the state levels," official sources in the commission clarified.

The proposed national entrance test as well as those to be conducted by the states and the individual institutions will measure the students' research aptitude, analytical skills, writing skills, comprehension and reasoning "beyond the subject competency with appropriate thresholds."



ಕೋಲಾರದ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಿಂದ 1.15 ಕೋಟಿ ರೂಪಾಯಿಗಳ ಚೆಕ್ ಅನ್ನು ಅಧ್ಯಕ್ಷ ಆರ್. ಎಲ್. ಜಾಲಪ್ಪ ಡಿಸಿ ಜೆ.ಮಂಜುನಾಥ್‌ಗೆ ಹಸ್ತಾಂತರಿಸಿದರು. ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಕುಲಾಧಿಪತಿ ಡಾ.ಎಸ್.ಕುಮಾರ್, ಸಂಸ್ಥೆ ಕುಲಪತಿ ಡಾ.ಜಿ. ಪ್ರದೀಪ್ ಕುಮಾರ್ ಇತರರು ಉಪಸ್ಥಿತರಿದ್ದರು.

ವಿಜಯ ಕರ್ನಾಟಕ



# ವೈದ್ಯ ಸೀಟು ಹೆಚ್ಚಳಕ್ಕೆ ಪತ್ರ

## ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಶೇ.10 ರಷ್ಟು ಮೀಸಲು

**ಬೆಂಗಳೂರು:** ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಶೇ.10ರಷ್ಟು ಮೀಸಲು ಯೋಜನೆಯಡಿ ರಾಜ್ಯ ಸರಕಾರಿ ವೈದ್ಯ ಕಾಲೇಜು ಮತ್ತು ಸಂಸ್ಥೆಗಳಲ್ಲಿ ವೈದ್ಯಕೀಯ ಸೀಟು ಹೆಚ್ಚಳ ಮಾಡುವಂತೆ ಕೋರಿ ಭಾರತೀಯ ವೈದ್ಯಕೀಯ ಮಂಡಳಿಗೆ ಪತ್ರ ಬರೆಯಲಾಗಿದೆ ಎಂದು ರಾಜ್ಯ ಸರಕಾರವು ಮಂಗಳವಾರ ಹೈಕೋರ್ಟ್‌ಗೆ ತಿಳಿಸಿದೆ.

ಪದ್ಮನಾಭನಗರದ ಅರ್ಜುನ್ ರೆಡ್ಡಿ ಎಂಬ ವಿದ್ಯಾರ್ಥಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ.ಎಲ್.ನಾರಾಯಣ ಸ್ವಾಮಿ ಮತ್ತು ನ್ಯಾ. ಆರ್.ದೇವದಾಸ್ ಅವರಿದ್ದ ವಿಭಾಗೀಯ ಪೀಠಕ್ಕೆ ಹೆಚ್ಚುವರಿ ಸರಕಾರಿ ವಕೀಲ ಲಕ್ಷ್ಮೀನಾರಾಯಣ ಈ ಮಾಹಿತಿ ನೀಡಿದರು.

ಸರಕಾರಿ ವಕೀಲರು, ಆರ್ಥಿಕವಾಗಿ ಹಿಂದುಳಿದ ವರ್ಗದ ಶೇ.10ರಷ್ಟು ಮೀಸಲು ಯೋಜನೆಯಡಿ ವೈದ್ಯ ಸೀಟು ಹೆಚ್ಚಳಕ್ಕೆ ಎಂಸಿಐ ಕೋರಲು ನಿರ್ಧರಿಸಲಾಗಿದೆ. ಈ ಬಗ್ಗೆ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ, ಎಂಸಿಐನ ಬೋರ್ಡ್ ಆಫ್ ಗವರ್ನರ್ಸ್‌ಗೆ 2019 ಜೂ 14ರಂದು ಪತ್ರ ಬರೆಯಲಾಗಿದೆ ಎಂದರು.

ಸರಕಾರಿ ವಕೀಲರ ಈ ಹೇಳಿಕೆ ದಾಖಲಿಸಿಕೊಂಡ ನ್ಯಾಯಪೀಠ, ಪ್ರಸಕ್ತ ಶೈಕ್ಷಣಿಕ ವರ್ಷದ ತರಗತಿಗಳು ಆರಂಭವಾಗಿದೆ. ಹೀಗಾಗಿ, ಪ್ರಸ್ತಕ ವರ್ಷದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗದ ಮೀಸಲು ಯೋಜನೆಯಡಿ ಸರಕಾರಿ ಕಾಲೇಜು ಮತ್ತು ಸಂಸ್ಥೆಗಳಲ್ಲಿ ವೈದ್ಯಕೀಯ ಸೀಟುಗಳನ್ನು ಹೆಚ್ಚಿಸಲು ಅವಕಾಶವಿಲ್ಲ, ಸೀಟು ಹೆಚ್ಚಳ ಬಗ್ಗೆ ಸರಕಾರ ನ್ಯಾಯಾಲಯಕ್ಕೆ ಭರವಸೆ ನೀಡಿದೆ. ಆದ್ದರಿಂದ ಅರ್ಜಿ ಇತ್ಯರ್ಥಪಡಿಸಲಾಗುವುದು ಎಂದು ಹೇಳಿ ಅರ್ಜಿಯನ್ನು ವಿಲೇವಾರಿ ಮಾಡಿದೆ.

ವಿಜಯ ಕರ್ನಾಟಕ

# ದೇವರಾಜ ಅರಸ್ ಸಂಸ್ಥೆಯಿಂದ ನೆರವು

**ಕೋಲಾರ:** ' ಉತ್ತರ ಕರ್ನಾಟಕದ ನೆರೆ ಸಂತ್ರಸ್ತರಿಗೆ ಶ್ರೀದೇವರಾಜ ಅರಸು ವಿದ್ಯಾಸಂಸ್ಥೆಯಿಂದ ಮುಖ್ಯಮಂತ್ರಿ ವಿಪತ್ತು ಪರಿಹಾರ ನಿಧಿಗೆ 1 ಕೋಟಿ ರೂ. ಹಾಗೂ ಶ್ರಿ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಎಲ್ಲ ಸಿಬ್ಬಂದಿ ವರ್ಗದ ಒಂದು ದಿನದ ವೇತನ 15 ಲಕ್ಷರೂ. ನೀಡಲಾಗಿದೆ. ಈ ಎರಡೂ ಚೆಕ್ಕುಗಳನ್ನು ಮಂಗಳವಾರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರಿಗೆ ಸಂಸ್ಥೆಯ ಅಧ್ಯಕ್ಷ ಆರ್.ಎಲ್. ಜಾಲಪ್ಪ, ಕಾರ್ಯದರ್ಶಿ ಜಿ. ಎಚ್.ನಾಗರಾಜ, ಕುಲಾಧಿಪತಿ ಡಾ. ಎಸ್.ಕುಮಾರ್ ಹಸ್ತಾಂತರಿಸಿದರು.

ಉದಯವಾಣಿ



# ದೇವರಾಜ ಅರಸು ಕಾಲೇಜಿನಿಂದ 1.15 ಕೋಟಿ ರೂ. ನೆರೆ ಪರಿಹಾರ



**ಕೋಲಾರ ನಗರದ ಶ್ರೀ ದೇವರಾಜ ಅರಸು ವಿದ್ಯಾ ಸಂಸ್ಥೆವತಿಯಿಂದ ರಾಜ್ಯದ ನೆರೆ ಸಂತ್ರಸ್ತರಿಗೆ ನೆರವಾಗಲು 1.15 ಕೋಟಿ ರೂ.ಗಳ ಚೆಕ್ ಅನ್ನು ಜಿಲ್ಲಾಧಿಕಾರಿ ಜೆ.ಮಂಜುನಾಥ್‌ರ ಮೂಲಕ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಲ್ಲಿಸಲಾಯಿತು.**

**ಕೋಲಾರ:** ರಾಜ್ಯದ ನೆರೆ ಸಂತ್ರಸ್ತರಿಗೆ ನೆರವಾಗಲು ನಗರದ ಶ್ರೀ ದೇವರಾಜ ಅರಸು ವಿದ್ಯಾ ಸಂಸ್ಥೆವತಿಯಿಂದ ಒಂದು ಕೋಟಿ ಹದಿನೈದು ಲಕ್ಷ ರೂ.ಗಳ ಚೆಕ್ ಅನ್ನು ಜಿಲ್ಲಾಧಿಕಾರಿ ಜೆ.ಮಂಜುನಾಥ್ ಮೂಲಕ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಲ್ಲಿಸಲಾಯಿತು.

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಜಲಪ್ರವಾಹದಿಂದ ಭಾರೀ ವಿನಾಶದೊಂದಿಗೆ ಆಸ್ತಿ - ಪಾಸ್ತಿಗೆ ನಷ್ಟ ಉಂಟಾಗಿದೆ. ಜನತೆ ಸಂಕಷ್ಟ ಎದುರಿಸುತ್ತಿದ್ದಾರೆ. ಹೀಗಾಗಿ ಶ್ರೀ ದೇವರಾಜ ಅರಸು ವಿದ್ಯಾ ಸಂಸ್ಥೆವತಿಯಿಂದ ಮುಖ್ಯಮಂತ್ರಿಗಳ ವಿಪತ್ತು ಪರಿಹಾರ ನಿಧಿಗೆ 1 ಕೋಟಿ ರೂ. ಹಾಗೂ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾಲಯದ ಎಲ್ಲಾ ಸಿಬ್ಬಂದಿಯ ಒಂದು ದಿನದ ವೇತನ 15 ಲಕ್ಷ ರೂ.ಗಳನ್ನು ಪರಿಹಾರವಾಗಿ ನೀಡಲಾಗಿದೆ.

ಈ ಚೆಕ್‌ಗಳನ್ನು ಕೋಲಾರದ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರಿಗೆ ಸಂಸ್ಥೆ ಅಧ್ಯಕ್ಷ ಆರ್.ಎಲ್.ಜಾಲಪ್ಪ, ಕಾರ್ಯದರ್ಶಿ ಜಿ.ಎಚ್.ನಾಗರಾಜ, ಕುಲಾಧಿಪತಿ ಡಾ.ಎಸ್.ಕುಮಾರ್ ಮತ್ತಿತರರು ಹಸ್ತಾಂತರಿಸಿದರು. ಈ ವೇಳೆ ಸಂಸ್ಥೆಯ ಇತರೆ ಮುಖ್ಯಸ್ಥರು ಉಪಸ್ಥಿತರಿದ್ದರು.

ಕನ್ನಡಪ್ರಭ



# ನಾಳೆ ಟ್ರಾಮಾ ಕೇಂದ್ರ ಉದ್ಘಾಟನೆ

## ಅಪಘಾತದಲ್ಲಿ ಗಾಯಗೊಂಡವರಿಗೆ ತುರ್ತು ಚಿಕಿತ್ಸೆ ನೀಡುವ ಉದ್ದೇಶ: ಡಾ.ಎಸ್.ಕುಮಾರ್

• **ಕನ್ನಡಪ್ರಭ ವಾರ್ತೆ** ಕೋಲಾರ

ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಿಂದ ಆ.15ರಂದು ತುರ್ತು ವೈದ್ಯ ವಿಭಾಗ ಹಾಗೂ ವಾಕ್ ಶ್ರವಣ ಹಾಗೂ ಅಡ್ವಾನ್ಸ್ ರೀಸರ್ಚ್ ಅಂಡ್ ಎಕ್ಸಲೆನ್ಸ್ ವಿಭಾಗಗಳ ಕಟ್ಟಡ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿದೆ ಎಂದು ಸಂಸ್ಥೆಯ ಕುಲಪತಿ ಡಾ.ಎಸ್.ಕುಮಾರ್ ತಿಳಿಸಿದರು.



ಕೋಲಾರದ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಡಾ.ಎಸ್.ಕುಮಾರ್ ಮಾತನಾಡಿದರು.

**ಆಕ್ಸಿಡೆಂಟ್ ಟ್ರಾಮಾ ಸೆಂಟರ್:** ನಗರದ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಅಪಘಾತಗಳು ಸಂಭವಿಸಿದಾಗ ತುರ್ತು ಚಿಕಿತ್ಸೆ ಸಿಗದೆ ಶಾಶ್ವತವಾಗಿ ಅಂಗವಿಕಲರಾಗುತ್ತಿದ್ದಾರೆ. ಈ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ಸೇರಿ ಪ್ರಮುಖ ಮುಖ್ಯ ರಸ್ತೆಗಳಿದ್ದು ಆಗಾಗ ಅಪಘಾತಗಳು ಸಂಭವಿಸುತ್ತಿವೆ, ಇಂತಹ ಗಾಯಾಳುಗಳಿಗೆ ಚಿಕಿತ್ಸೆ ನೀಡಲು ಜಾಲಪ್ಪ ಆಸ್ಪತ್ರೆಯಲ್ಲಿ ಆಕ್ಸಿಡೆಂಟ್ ಟ್ರೋಮಾ ಸೆಂಟರ್ ಆರಂಭಿಸಲಾಗುತ್ತಿದೆ' ಎಂದು ವಿವರಿಸಿದರು.

ನಿಮಾನ್ಸ್ ಸಂಸ್ಥೆಯ ಮಾಜಿ ಉಪ ಕುಲಪತಿ ಡಾ.ಪಿ.ಸತೀಶ್‌ಚಂದ್ರ ಉದ್ಘಾಟಿಸತ್ತಾರೆ, ಅಪೋಲೋ ಆಸ್ಪತ್ರೆಯ ತುರ್ತು ವೈದ್ಯ ವಿಭಾಗದ ಮುಖ್ಯಸ್ಥ ಡಾ.ಅರುಣ ಸಿ.ರಮೇಶ್ ನೂತನ ಕಟ್ಟಡಗಳನ್ನು ಉದ್ಘಾಟಿಸುತ್ತಾರೆ. ಸಂಸ್ಥೆಯ ಕುಲಾಧಿಪತಿ ಡಾ.ಎಸ್.ಕುಮಾರ್, ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಕಾರ್ಯದರ್ಶಿ ಜೆ.ರಾಜೇಂದ್ರ ಅತಿಥಿಗಳಾಗಿ ಭಾಗವಹಿಸುತ್ತಾರೆ' ಎಂದು ವಿವರಿಸಿದರು.

**ನೆರೆ ಸಂತ್ರಸ್ತರಿಗೆ ನೆರವು:** ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಮಾತನಾಡಿ, ಇತ್ತೀಚೆಗೆ ಉತ್ತರ ಕರ್ನಾಟಕ ಭಾಗದಲ್ಲಿ ಸಂಭವಿಸಿರುವ ನೆರೆ ಹಾಳಿಯ ಸಂತ್ರಸ್ತರಿಗೆ ಸಂಸ್ಥೆಯ ಎಲ್ಲಾ ಸಿಬ್ಬಂದಿ, ಅಧಿಕಾರಿಗಳ ಒಂದು ದಿನ ವೇತನ ಮೀಸಲಿಟ್ಟಿದ್ದು, 10 ಲಕ್ಷ ಆಗಲಿದೆ. ಅಲ್ಲದೆ ಸಂಸ್ಥೆಯಿಂದಲೂ 1 ಕೋಟಿ ನೆರವು ನೀಡಲಾಗುವುದು. ಅಲ್ಲದೆ ವೈದ್ಯರ ತಂಡ ಅಗತ್ಯ ಸಾಮಾಗ್ರಿಗಳನ್ನು ಕಳುಹಿಸುವ ಪ್ರಯತ್ನ ಮಾಡುತ್ತಿದೆ' ಎಂದು ಹೇಳಿದರು.

ಕೋಲಾರಪತ್ರಿಕೆ



ಪ್ರವಾಹ ಪೀಡಿತರ ನೆರವಿಗೆ ಬಂದ ದೇವರಾಜ ಅರಸು ವಿದ್ಯಾಸಂಸ್ಥೆ

# ಮುಖ್ಯಮಂತ್ರಿ ಪರಿಹಾರ ನಿಧಿಗೆ ಕೋಟಿ ರೂ.



ಕೋಲಾರ ಆ ೧೩– ಜಲ ಪ್ರವಾಹದ ಅನಾಹುತಕ್ಕೆ ಸಿಕ್ಕಿರುವ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಭಾರಿ ವಿನಾಶವಾಗಿರುವ ಹಿನ್ನೆಲೆಯಲ್ಲಿ ನಗರದ ಹೊರವಲಯದ ದೇವರಾಜ್‌ಅರಸ್ ವಿದ್ಯಾ ಸಂಸ್ಥೆಯ ವತಿಯಿಂದ ಮುಖ್ಯಮಂತ್ರಿಗಳ ವಿಪತ್ತು ಪರಿಹಾರ ನಿಧಿಗೆ ಒಂದು ಕೋಟಿ ರೂ.ಗಳನ್ನು ಹಾಗೂ ಶ್ರೀ ದೇವರಾಜ್ ಅರಸ್‌ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಎಲ್ಲ ಸಿಬ್ಬಂದಿ ವರ್ಗದವರ ಒಂದು ದಿನದ ವೇತನ ಹದಿನೈದು ಲಕ್ಷ ರೂ.ಗಳ ಚೆಕ್‌ಗಳನ್ನು ಜಿಲ್ಲಾಧಿಕಾರಿ ಜೆ. ಮಂಜುನಾಥ್‌ರಿಗೆ ನೀಡಲಾಯಿತು.

ಈ ಸಂದರ್ಭದಲ್ಲಿ ದೇವರಾಜ ಅರಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್.ಎಲ್.ಜಾಲಪ್ಪ, ಕಾರ್ಯದರ್ಶಿ ಜಿ.ಎಚ್.ನಾಗರಾಜ, ಕುಲಾಧಿಪತಿ ಡಾ॥ ಎಸ್.ಕುಮಾರ್, ಸಂಸ್ಥೆಯ ಇತರೆ ಮುಖ್ಯಸ್ಥರು ಉಪಸ್ಥಿತರಿದ್ದರು.

ಕೋಲಾರಶಕ್ತಿ



# ಆ.15 ದೇವರಾಜ ಅರಸು ಉನ್ನತ ಶಿಕ್ಷಣ ಸಂಶೋಧನಾ ಸಂಸ್ಥೆಯಿಂದ ತುರ್ತು ವೈದ್ಯ ವಿಭಾಗ ಹಾಗೂ ವಾಕ್ ಶ್ರವಣ ಕಟ್ಟಡಗಳ ಲೋಕಾರ್ಪಣೆ



ಕೋಲಾರ: 'ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಿಂದ ಆ.15ರಂದು ತುರ್ತು ವೈದ್ಯ ವಿಭಾಗ ಹಾಗೂ ವಾಕ್ ಶ್ರವಣ ಹಾಗೂ ಅಡ್ವಾನ್ಸ್ ರೀಸರ್ಚ್ ಅಂಡ್ ಎಕ್ಸಲೆನ್ಸ್ ವಿಭಾಗಗಳ ಕಟ್ಟಡ ಉದ್ಘಾಟನಾ ಸಮಾರಂಭವನ್ನು

ಏರ್ಪಡಿಸಲಾಗಿದೆ' ಎಂದು ಸಂಸ್ಥೆಯ ಕುಲಾಧಿಪತಿ ಡಾ.ಎಸ್.ಕುಮಾರ್ ತಿಳಿಸಿದರು. ನಗರದ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಸಂಸ್ಥೆಯ ಅಧ್ಯಕ್ಷ

ಆರ್.ಎಲ್.ಜಾಲಪ್ಪ ಅವರ ಆಶಯದಂತೆ ಜಿಲ್ಲೆಯ ಜನರ ಅನುಕೂಲಕ್ಕಾಗಿ ಪ್ರತಿ ವರ್ಷದಂತೆ ಈ ವರ್ಷವೂ ವಿವಿಧ ವಿಭಾಗಗಳನ್ನು ಆರಂಭಿಸಲಾಗುತ್ತಿದೆ' ಎಂದರು. 'ಜಿಲ್ಲೆ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ಬಡ ಜನರಿಗೆ ಗುಣಮಟ್ಟದ ಆರೋಗ್ಯ

ಸೇವೆ ಕಲ್ಪಿಸುವ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಿಕೊಂಡಿದ್ದು ಅದರಂತೆ ಅಗತ್ಯ ಸೌಕರ್ಯ ಕಲ್ಪಿಸಲು ಟ್ರಸ್ಟ್ ಸದಾ ಸಿದ್ಧವಿದೆ' ಎಂದು ಹೇಳಿದರು. 'ದೇಶದಲ್ಲಿ ಪ್ರತಿ ದಿನ ಸುಮಾರು ಅತಘಾತಗಳು ಸಂಭವಿಸುತ್ತಿದ್ದು, ಆ ಪೈಕಿ 6

ಲಕ್ಷ ಮಂದಿಯಷ್ಟು ತೀವ್ರವಾಗಿ ಗಾಯಗೊಂಡು ಅಂಗಗಳನ್ನು ಕಳೆದುಕೊಂಡು ಮೂಲೆಗುಂಪಾಗುತ್ತಿದ್ದಾರೆ. ತುರ್ತು ಚಿಕಿತ್ಸೆ ಸಿಗದ ಕಾರಣ ಈಗೆ ಸಮಸ್ಯೆ

ಎದುರಿಸುತ್ತಿದ್ದಾರೆ. ಈ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ಸೇರಿ ಪ್ರಮುಖ ಮುಖ್ಯ ರಸ್ತೆಗಳಿದ್ದು ಅಪಘಾತಗಳು ಸಂಭವಿಸುತ್ತಿವೆ, ಇದರಿಂದ ಗಾಯಾಳುಗಳನ್ನು ಜಾಲಪ್ಪ ಆಸ್ಪತ್ರೆಗೆ ತರುವುದರಿಂದ ಅಕ್ಸಿಡೆಂಟ್ ಟ್ರೋಮಾ ಸೆಂಟರ್ ಆರಂಭಿಸಲಾಗುತ್ತಿದೆ' ಎಂದು ವಿವರಿಸಿದರು. 'ಆಪಘಾತ ಸಂದರ್ಭದಲ್ಲಿ ತುರ್ತು ಚಿಕಿತ್ಸೆ ಕಲ್ಪಿಸಿದ ಆದಲ್ಲಿ ಜೀವನ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ. ಜಿಲ್ಲೆಯಿಂದ 150 ಕಿಮಿ ವ್ಯಾಪ್ತಿಯಲ್ಲಿ ಎಲ್ಲ ರೀತಿಯ ಸೌಕರ್ಯ ಸಿಗುವ ಸುಸಜ್ಜಿತ ಆಸ್ಪತ್ರೆ ಇದೇ ಆಗಿದ್ದು, ಮತ್ತಷ್ಟು

ಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ' ಎಂದು ತಿಳಿಸಿದರು. 'ಉದ್ಘಾಟನಾ ಸಮಾರಂಭವೂ ಸಂಸ್ಥೆಯ ರಜತ ಮಹೋತ್ಸವ ಸಭಾಂಗಣದಲ್ಲಿ ನಡೆಯಲಿದ್ದು, ನಿಮಾನ್ಸ್ ಸಂಸ್ಥೆಯ ಮಾಜಿ ಉಪ ಕುಲಪತಿ ಡಾ.ಪಿ.ಸತೀಶ್‌ಚಂದ್ರ ಉದ್ಘಾಟಿಸತ್ತಾರೆ, ಅಪೋಲೋ ಆಸ್ಪತ್ರೆಯ ತುರ್ತು ವೈದ್ಯ ವಿಭಾಗದ ಮುಖ್ಯಸ್ಥೆ ಡಾ.ಅರುಣ ಸಿ.ರಮೇಶ್ ನೂತನ ಕಟ್ಟಡಗಳನ್ನು ಉದ್ಘಾಟಿಸುತ್ತಾರೆ. ಸಂಸ್ಥೆಯ

ಕುಲಾಧಿಪತಿ ಡಾ.ಎಸ್.ಕುಮಾರ್, ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಕಾರ್ಯದರ್ಶಿ ಜೆ.ರಾಜೇಂದ್ರ ಅತಿಥಿಗಳಾಗಿ ಭಾಗವಹಿಸುತ್ತಾರೆ' ಎಂದು ವಿವರಿಸಿದರು. ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಮಾತನಾಡಿ, 'ಸಂಸ್ಥೆಯೂ ಕೇವಲ ಆರೋಗ್ಯ, ಶಿಕ್ಷಣ ಸೇವೆಯಲ್ಲದೆ ನೆರೆ ಸಂತ್ರಸ್ತರಿಗೆ ನೆರವು ನೀಡುವ ಮತ್ತು ಸಾಮಾಜಿಕ ಹೊಣೆಗಾರಿಕೆ ಕಾರ್ಯಕ್ರಮಗಳನ್ನು ನಡೆಸಿಕೊಂಡು

ಬರಲಾಗುತ್ತದೆ. ಹಿಂದೆ ಕೇರಳ ಹಾಗೂ ಕೊಡಗು ನೆರೆ ಸಂತ್ರಸ್ತರಿಗೆ 10 ಕೋಟಿ ನೆರವು ನೀಡಲಾಗಿದೆ' ಎಂದರು.

'ಇತ್ತೀಚಿಗೆ ಉತ್ತರ ಕರ್ನಾಟ ಭಾಗದಲ್ಲಿ ಸಂಭವಿಸಿರುವ ಪ್ರವಾಹಕ್ಕೆ ಸಿಲುಕಿರುವ ನೆರೆ ಸಂತ್ರಸ್ಥರಿಗೆ ಸಂಸ್ಥೆಯ ಎಲ್ಲಾ ಸಿಬ್ಬಂದಿ, ಅಧಿಕಾರಿಗಳ ಒಂದು ದಿನ ವೇತನ ಮೀಸಲಿಟ್ಟಿದ್ದು, 10 ಲಕ್ಷ ಅಗಲಿದೆ, ಅಲ್ಲದೆ ಸಂಸ್ಥೆಯಿಂದಲೂ 1 ಕೋಟಿ ನೆರವು

ನೀಡಲಾಗುತ್ತಿದ್ದು, ಜಿಲ್ಲಾಧಿಕಾರಿಗಳ ಮೂಲಕ ತಲುಪಿಸಲಾಗುವುದು, ಜತೆಗೆ ವೈದ್ಯರ ತಂಡ ಅಗತ್ಯ ಸಾಮಾಗ್ರಿಗಳನ್ನು ಕಳುಹಿಸುವ ಪ್ರಯತ್ನ ಮಾಡುತ್ತಿದೆ' ಎಂದು ಹೇಳಿದರು.

'ರಾಜ್ಯದಲ್ಲಿ 54 ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಇದ್ದು ಪ್ರವಾಹದಿಂದ ಅಗುವ ಸಾಂಕ್ರಾಮಿಕ ರೋಗಗಳನ್ನು ತಡೆಯಲು ಅಗತ್ಯ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲು ತರಬೇತಿ ನೀಡಲಾಗುವುದು. ಇದಕ್ಕೆ ಸರ್ಕಾರ ವೈದ್ಯಕೀಯ ಕಾಲೇಜುಗಳಿಗೆ ಜವಾಬ್ದಾರಿ ನೀಡಬೇಕು' ಎಂದು ಒತ್ತಾಯಿಸಿದರು. ಕುಲಪತಿ ಡಾ.ಜಿ.ಪ್ರದೀಪ್, ವೈದ್ಯಕೀಯ ಅಧೀಕ್ಷಕ ಡಾ.ವಿ.ಲಕ್ಷ್ಮಯ್ಯ, ಡೀನ್ ಡಾ.ಶ್ರೀನಿರಾಮುಲು, ಡಾ.ಮುನಿನಾರಾಯಣ ಹಾಜರಿದ್ದರು.